EX- 10/2016 ಪಿ.ಡಬ್ಲ್ಯೂಃ- 2

ದಿನಾಂಕಃ 23.06.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಜೆ.ಡಿ.ಆರ್ ಪರ ಶ್ರೀ. ಬಿ.ಎಂ.ಪಿ ವಕೀಲರಿಂದ

ಡಿಕ್ರಿ ಹೋಲ್ಡರ್ ರವರು ಈ ಪಿಟಿಶನ್ ಅನ್ನು ಯಾರ ವಿರುದ್ಧ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಗಿರೀಶ್ ನಾಯ್ಕ ಮತ್ತು ಅವರ ತಾಯಿಯ ವಿರುದ್ಧ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಗೊತ್ತಿದೀಯಾ ಎಂದರೆ ಹೌದು ನಾನೇ ಹೇಳಿ ಬರೆಸಿರುತ್ತೇನೆ. ಯಾವ ದಿನಾಂಕದಂದು ತೀರ್ಪುರುಣಿಗಾರರು ದಾವಾ ಸ್ವತ್ತಿಗೆ ತೊಂದರೆ ನೀಡಿರುತ್ತಾರೆ ಎಂದರೆ ದಿನಾಂಕ ಗೊತ್ತಿಲ್ಲ. ದಾವಾ ಸ್ವತ್ತು ಡಿಕ್ರಿ ಹೋಲ್ಡರ್ ರವರಿಗೆ ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಡಿಕ್ರಿ ಹೋಲ್ಡರ್ ರವರು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ